Doc-549
T.P-2

Reg No B G 155 24 — 9 —72

In The State **First Golden Jubilee Celebrated Paper 'Satyavadi' daily, Mysore 4**

56th Year of Publication

★

News, Views, Dharmic Moral Ethical Matters

ರಾಷ್ಟ್ರದಲ್ಲಿ ಪ್ರಥಮ ಸುವರ್ಣ ಮಹೋತ್ಸವ ಪೂರೈಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಂಗಳೂರು ಅರಮನೆ ಮಾರಾಟಕ್ಕೆ ಕಾನೂನು

ಬೆಂಗಳೂರು ಅರಮನೆ

ಮೈಸೂರಿನ ಮಾಜಿ ಮಹಾರಾಜರು ಬೆಂಗಳೂರು ಅರಮನೆಯನ್ನು ವಿಲೇ ಮಾಡಲು ಅನುಕೂಲಿಸುವದಕ್ಕಾಗಿ ಮೈಸೂರು ಸರಕಾರವು ಒಂದು ಶಾಸನವನ್ನು ಕ್ಷಿಪ್ರದಲ್ಲೇ ಮಂಜೂರ್ಮಾಡುವ ನಿರೀಕ್ಷಣೆ ಇದೆ— ಈ ಶಾಸನವು ಈ ವಿಷಯದಲ್ಲಿರುವ ವಾಗ್ವಾದವನ್ನು ಮುಕ್ತಾಯಗೊಳಿಸುತ್ತದೆ.

★

ಭತ್ತ, ಜೋಳ ದೊರಕಿಸಿಕೊಳ್ಳುವುದು

ಬೆಂಗಳೂರು— ಭತ್ತ ಮತ್ತು ಜೋಳವನ್ನು ಪಡೆಯುವ ವಿಷಯದಲ್ಲಿ ಸರಕಾರವು ಒತ್ತಾಯದ ಮತ್ತು ಬಲಯುತ ಕಾರ್ಯಕ್ರಮ ಕೈಗೊಳ್ಳುವದೆಂದೂ, ಹೀಗೆ ಪಡೆಯುವುದರ ಬೆಲೆ ಹೆಚ್ಚಿಸಲು ಕೇಂದ್ರದ ಅನುಮತಿ ಕೇಳಲು ಸರಕಾರ ನಿರ್ಧರಿಸಿದೆಯೆಂದೂ ಗೊತ್ತಾಗಿದೆ.

★

ಶಾಸನೋಲ್ಲಂಘನೆ

ಕೊಲಂಬೊ— ತಮಿಳರ ಶಾಸನೋಲ್ಲಂಘನೆ ಪ್ರಾರಂಭದ ಗುರುತಾಗಿ ಪಾರ್ಲಿಮೆಂಟಿನಲ್ಲಿರುವ 16 ತಮಿಳರಲ್ಲಿ 3 ಮಂದಿಯಾದರೂ ರಾಜೀನಾಮೆ ಕೊಡಲಿರುವರು; 2 ನೆ ಅಕ್ಟೋಬರು ಗಾಂಧಿ ಜನ್ಮದಿನೋತ್ಸವದಂದು ಹರತಾಳ ಏರ್ಪಡಿಸಲಾಗುವುದು.

★

ಸಬರಮೈ

ಕೊಟ್ಟಾಯಂ— ಸಬರಮೈನ ಸೆಷ್ಟಾ ದೇವಾಲಯವನ್ನು ರೂ. 11 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸುವ ಯೋಜನೆಯನ್ನು ದೇವಾಸಂ ಮಂಡಲಿ ತಯಾರಿಸಿದೆ — ದೇವಸ್ಥಾನದ ಹತ್ತಿರದ ಸರಂಕುಥಿಯಾಲ್ ಸುತ್ತಮುತ್ತ ಇರುವ 20 ಎಕ್ರೆ ಭೂಮಿಯನ್ನು ದೇವಸ್ಥಾನಕ್ಕೆ ಕೊಡುವು ಸರಕಾರ ಒಪ್ಪಿದೆ — ಯಾತ್ರಿಕರಿಗೆ ತುಂಬಾ ಸೌಕರ್ಯ ಒದಗಿಸಲಾಗುವುದೆನ್ನಲಾಗಿದೆ.

ದೀಪದಕಡ್ಡಿಗೆ ತೆರಿಗೆ

ನವದೆಹಲಿ— ದೀಪದಕಡ್ಡಿ ಕೈಗಾರಿಕೆಗೆ ಪುನಃ ಆಬ್ಕಾರಿ ತೆರಿಗೆ ವಿಧಿಸಲಾಗುವುದು; ಪೆಟ್ಟಿಗೆಗಳ ಮೇಲೆ ಈ ಬಗ್ಗೆ ಚೀಟಿ ಅಂಟಿಸಬೇಕು.

●

ಅಯೂಬರ ಉಮೇದುವಾರಿಕೆ

ನವದೆಹಲಿ— ಪಾಕಿಸ್ತಾನ್ ನ್ಯಾಷನಲ್ ಅಸೆಂಬ್ಲಿಯಲ್ಲಿ ಖಾಲಿಯಾಗಿರುವ ಒಂದು ಸ್ಥಾನಕ್ಕೆ ಸ್ಪರ್ಧಿಸಲು ಸಂಯುಕ್ತ ವಿರೋಧ ಪಕ್ಷ ಮಾಜಿ ಅಧ್ಯಕ್ಷ ಅಯೂಬರನ್ನು ಆಹ್ವಾನಿಸಿದೆ.

★

ಬಸ್‌ನವರ ಪ್ರದರ್ಶನ

ಬೆಂಗಳೂರು— ಮೋಟಾರು ವಾಹನ ತೆರಿಗೆಯನ್ನು ರೂ 35 ರಿಂದ 100 ಕ್ಕೆ ಹೆಚ್ಚಿಸಿರುವದನ್ನು ಪ್ರತಿಭಟಿಸಿ, ಖಾಸಗಿ ಬಸ್ ಆಪರೇಟರುಗಳು ಮತ್ತು ಕೆಲಸಗಾರರು ತಮ್ಮ ವಾಹನಗಳನ್ನು ಓಡಿಸುವುದನ್ನು ನಿಲ್ಲಿಸಿ, ತಾ॥ 26 ರಂದು ಬೆಂಗಳೂರಿನಲ್ಲಿ ಪ್ರದರ್ಶನ ನಡೆಸುವರು.

★

3 ಲಕ್ಷ ವರ್ಷಗಳ ಹಿಂದಿನದು

ಕಾಬ್ರೋವರ್ಕ್ಸ್— 3 ಲಕ್ಷ ವರ್ಷಗಳ ಹಿಂದಿನ ಮಾನವನು ಉಪಯೋಗಿಸುತ್ತಿದ್ದ ಅನೇಕ ಸಲಕರಣೆಗಳ ಪುರಾತನ ಕಾರ್ಖಾನೆಯು ಮಂಗೋಲಿಯಾದ ಯೂರ್ಹ್ ಪರ್ವತದ ಹತ್ತಿರ ಪತ್ತೆಯಾಗಿದೆ

★

ಪಾದ್ರಿಯ ಸ್ತುತ್ಯ ನಡವಳಿಕೆ

ಇಟಲಿಯ ಅಸಿಸಿ ನಗರದಲ್ಲಿ ಶತಮಾನಗಳ ಹಿಂದೆ ವಾಸಿಸುತ್ತಿದ್ದ ಸೆಂಟ್ ಫ್ರಾನ್ಸಿಸ್ ಪಾದ್ರಿಯು ಪಕ್ಷಿಗಳನ್ನೂ, ಪ್ರಾಣಿಗಳನ್ನೂ, ಗಿಡಗಳನ್ನೂ, ಪ್ರೀತಿಸುತ್ತಿದ್ದನಲ್ಲದೆ, ಕಲ್ಲುಗಳಂಥ ನಿರ್ಜೀವಿಗಳನ್ನೂ ಪ್ರೀತಿಸುತ್ತಿದ್ದನು.

ಕ್ಷೀರೋತ್ಸವ

ಕೀಲ್ (ಡಾಡ್)— ಈ ವರ್ಷ ಅಂತರರಾಷ್ಟ್ರೀಯ ಕ್ಷೀರೋತ್ಸವ ಸಮಾರಂಭವನ್ನು 19 ರಾಷ್ಟ್ರಗಳಲ್ಲಿ ನಡೆಸಲಾಯಿತು ಮುಖ್ಯವಾಗಿ ಕ್ಷೀರದ್ರವ ಆಹಾರವು ಎಷ್ಟರಮಟ್ಟಿಗೆ ಪೋಷಕಾಂಶಗಳನ್ನು ಒದಗಿಸುವುದರಿಂದ ಆಬಾಲವೃದ್ಧರು ಆರೋಗ್ಯ ರಕ್ಷಣೆ ಮಾಡಿಕೊಳ್ಳಲು ಸಾಧ್ಯ ಎಂಬ ಅಂಶವನ್ನು ವಿಶದೀಕರಿಸಲಾಯಿತು. ಈ ಸಂದರ್ಭದಲ್ಲಿ ಕ್ಷೀರ ದಿನದಂದು ಹುಟ್ಟಿದ ಮಕ್ಕಳಿಗೆ ಒಂದೂವರೆ ಲೀಟರ್ ಹಾಲನ್ನು ಉಚಿತವಾಗಿ ಆರು ತಿಂಗಳವರೆಗೆ ಒದಗಿಸುವ ಕಾರ್ಯವನ್ನು ಉತ್ತರ ಜರ್ಮನಿಯ ಕ್ಷೀರ ಕ್ಷೇತ್ರಗಳು ಒಪ್ಪಿಕೊಂಡವು.

★

ಪ್ಲಾಸ್ಟಿಕ್ ಕೊಕ್ಕು

ಬ್ರೆಮೆ (ಡಾಡ್)— ಫೆಡರಾಲ್ ಜರ್ಮನಿಯ ಬ್ರೇಮರ್‌ಹೇವ್ ಮೃಗಶಾಲೆಯಲ್ಲಿನ ಇಂಡಿಯನ್ ರೈನಾಸಿರಸ್ ಹಕ್ಕಿ ತನ್ನ ಮೇಲಿನ ಕೊಕ್ಕನ್ನು ಕಳೆದುಕೊಂಡಿತು — ಕೃತಕ ಕೊಕ್ಕನ್ನು ತಯಾರಿಸಿ ಅಂಟಿಸಲಾಯಿತು — ನಂತರ ಧಾನ್ಯವನ್ನು ತಿಂದು ಪ್ರೇಕ್ಷಕರನ್ನು ಆಕರ್ಷಿಸಿತು.

★

ಪ್ರಾಣಿಧಾಮದಲ್ಲಿ ಅಗಾಧ ನಷ್ಟ

ಭರತಪುರದಲ್ಲಿ ಈಚಿನ ಪ್ರವಾಹೆಗಳಿಂದ ವನ್ಯಜೀವಿಗಳ ನಷ್ಟವೆಷ್ಟಾಗಿದೆಯೆಂದರೆ ಅವುಗಳನ್ನು ಮತ್ತೆ ಭರ್ತಿಮಾಡಿಕೊಳ್ಳಲು 10 ವರ್ಷಗಳು ಬೇಕೆಂದು ಆ ವಿಭಾಗದ ಅರಣ್ಯಾಧಿಕಾರಿಗಳ ಅಭಿಪ್ರಾಯವಾಗಿದೆ : ಅಲ್ಲಿಯ ಪ್ರಾಣಿಧಾಮದಲ್ಲಿ ಯಥೇಚ್ಛವಾಗಿ ವಿವಿಧ ಪ್ರಾಣಿಗಳಿದ್ದವು ; ಆರ್ದ್ರ ಏರಿ ಒಡೆದುಹೋದನಂತರ ಅಲ್ಲಿ ಒಂದು ದೊಡ್ಡ ಸರೋವರದಂತೆಯೇ ಆಗಿ 25 ಮಾಟರು ಆಳದಲ್ಲಿ ನೀರು ನಿಂತಿತ್ತು.

ಪುರಸಭೆ

ಮೈಸೂರು— ಈ ಮಾಹೆಯ ಸಾಧಾರಣ ಪುರಸಭಾ ಅಧಿವೇಶನವು ತಾ ॥ 30 ಶನಿವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯಲಿದೆ.

ನಂ. ಎಸ್‌ಎಎಸ್ 128-2217/72-73

ಸಂಕ್ಷಿಪ್ತ ಮಾರಾಟ

ಪ್ರಕಟಣೆ

ತೇಗದ ತುಂಡುಗಳು ಮತ್ತು ಕೊನೆಗಳು ಈ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ಹರಾಜು ಮಾಡಲಾಗುವುದೆಂಬುದನ್ನು ಸಾರ್ವಜನಿಕರ ತಿಳಿವಳಿಕೆಗಾಗಿ ಪ್ರಕಟಿಸಲಾಗಿದೆ.

ರೇಂಜಿನ ಮತ್ತು ಮಾರಾಟದ ಸ್ಥಳದ ಹೆಸರು—

ರೇಂಜ್ ಅರಣ್ಯ ಕಛೇರಿ, ಕಾಕನಕೋಟೆ

ಮಾರಾಟದ ತಾರೀಖು ಮತ್ತು ಕಾಲ—

29–9–72 ; ಮ್ಯಧ್ಯಾಹ್ನ 12 ಗಂಟೆ

ಅಂದಾಜು ಪ್ರಮಾಣ, ತೆರೆದಿರುವ ದರ—

ತೇಗದ ತುಂಡು ಮತ್ತು ಕೊನೆ 350 ಕ್ಯೂಬ್.

ಇ. ಎಂ. ಡಿ—

ರೂ. 500/–

ಮಾರಾಟ ನಡೆಸುವ ಅಧಿಕಾರಿಯವರು—

ಮೈಸೂರು ವಿಭಾಗ ಅರಣ್ಯಾಧಿಕಾರಿಯವರು ಅಥವಾ ಅವರಿಂದ ಅಧಿಕಾರ ಪಡೆದ ಇತರ ಯಾರಾದರೂ ಅಧಿಕಾರಿಯವರು.

ಸಹಿ/–

(ಹೆಚ್. ವಿ ರಾಮಚಂದ್ರ ಜೆಟ್ಟಿ)

ವಿಭಾಗ ಅರಣ್ಯಾಧಿಕಾರಿ, ಮೈಸೂರು

ಭಾಷಣ ದಾಖಲೆ

ಭಾಷಣ ಬಿಗಿಯುವದರಲ್ಲಿ ಟೆಕ್ಸಾಸಿನ ಶಾಸನಸಭೆಯಲ್ಲಿ ಸೆನೇಟರ್ ಆಗಿರುವ ಮೈ ಮ್ಯಾಕೂಲ್ ಎಂಬುವರು ಅಮೇರಿಕಾದಲ್ಲಿ ಹೊಸ ದಾಖಲೆ ಸ್ಥಾಪಿಸಿದ್ದಾರೆ; ಅವರು ಏಕಪ್ರಕಾರವಾಗಿ 45 ಗಂಟೆ 35 ನಿಮಿಷ ಮಾತನಾಡಿದರು.

ದಂತವೈದ್ಯನಿಗೆ ಗುಂಡು

ಲೋಸ್ ಏಂಜಲ್ಸ್‌ನ ದಂತವೈದ್ಯನೊಬ್ಬ ತಪ್ಪು ಇಕ್ಕಳದಿಂದ ಒಬ್ಬನ ಹಲ್ಲು ತೆಗೆಯಲು ಉಪಕ್ರಮಿಸಿದ; ಚಿಕಿತ್ಸೆಗಾಗಿ ಬಂದಿದ್ದ ಟಾಂ ವಾಟರ್ಸ್ ನೋವಿನಿಂದ ಅರಚಿ, ಕೋಪಗೊಂಡು ದಂತವೈದ್ಯನನ್ನು ಗುಂಡಿಕ್ಕಿ ಕೊಂದ. ವಿಚಾರಣೆಗೊಳಗಾದಾಗ ಅವನನ್ನು ನಿರಪರಾಧಿ ಎಂದು ಬಿಡುಗಡೆ ಮಾಡಲಾಯಿತು. ತೀರ್ಪು ನೀಡಿದ ನ್ಯಾಯಾಧೀಶರೂ ಕೂಡ ಆ ವೈದ್ಯನ ಬಳಿ ಅದೇ ಬಗೆಯಲ್ಲಿ ನೋವು ಅನುಭವಿಸಿದ್ದರು!

ಶ್ರೀಮಂತಿಕೆ ಅನುಭವಿಸಿರಿ

ಬ್ರಿಟಿಷ್ ಶ್ರೀಮಂತರ ಮನೆಗಳು ಸಾಮಾನ್ಯ ಜನರ ಪ್ರವೇಶಕ್ಕೆ ಈವರೆಗೆ ಮುಚ್ಚಲ್ಪಟ್ಟಿದ್ದವು; ಈಗ ಅವರು ತಮ್ಮ ಮನೆಗಳನ್ನು ಸಾರ್ವಜನಿಕರಿಗೆ ತೆಗೆಯುತ್ತಿದ್ದಾರೆ; ಪಶ್ಚಿಮ ಜರ್ಮನಿ ಪತ್ರಿಕೆಗಳಲ್ಲಿ ' 221 ಮಾರ್ಕ್‌ಗಳನ್ನು ನೀಡಿದರೆ ಶ್ರೀಮಂತರ ಆರಮನೆಗಳಲ್ಲಿ ಒಂದು ದಿನ ಇರಬಹುದು " ಎಂದು ಜಾಹಿರಾತು ಪ್ರಕಟವಾಗಿದೆ; ಇಷ್ಟು ಹಣ ನೀಡಿ ಯಾರು ಬೇಕಾದರೂ ಒಂದು ದಿನ ಶ್ರೀಮಂತರ ಜೀವನ ನಡೆಸಬಹುದು!

SHAKTI SUDHA

A Superb Tonic

ಅಖಿಲಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ 22-9-72ರಿಂದ ಅನೋಫ 3ನೇ ವಾರ

ಫಿಲಂಯುಗ ಅರ್ಪಿಸುವ

ಆಂಖೊ ಆಂಖೊ ಮೆ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ : ರಾಖಿ, ರಾಖೇಶ್ ರೋರ್ಷ ಮತ್ತು ಪ್ರಾಣ್

ಬೆಳಗಿನ ಪ್ರದರ್ಶನ 10–30 ಕ್ಕೆ ಚೋಟೇಸಿ ಮುಲಾಖತ್

ಅಪೆರಾ 22 9 72 ರಿಂದ

ಶ್ರೀ ನವನೀತ್ ಫಿಲಂಸ್‌ರವರ ಅನೋಫ ತಮಿಳು ಚಿತ್ರ

ಪುಗುಂದ ವೀಡು

ನಿರ್ದೇಶನ : ಪಟ್ಟು

ಪ್ರತಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

★

ಆನೆ-ಹುಡುಗ

Potect the Cow

Help The Gorakshana

— Humanitarian Propoganda Monthly ....

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmaprachara Nirata M S Krishna Rao (Propretor) at the Satyavad Press Chamarajapuram Mysore